# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147
## ದಿನಾಂಕ:18-06-2022 ರಂದು ಜೂನ್-2022 ರ ಮಾಹೆಯ
## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಡಾ॥ ಧನ್ಯಕುಮಾರ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಮೌಖಿಕ ಆದೇಶದ ಮೇರೆಗೆ ಶ್ರೀ ಪಿ. ಚಂದ್ರಶೇಖರ್. ಕಾರ್ಯದರ್ಶಿ. ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ:18.06.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಸಂಪತ್
2. ಶ್ರೀ ತ್ಯಾಗರಾಜ್
3. ಶ್ರೀಮತಿ ರತ್ನಮ್ಮ
4. ಶ್ರೀ ಎಂ. ಗೋಪಾಲ್
5. ಶ್ರೀ ಕೆಂಪರಾಜು

**ಹಾಜರಿದ್ದ ಅಧಿಕಾರಿಗಳು:-**

1. ಡಾ॥ ಧನ್ಯಕುಮಾರ್, ನೋಡಲ್ ಅಧಿಕಾರಿಗಳು ವಾರ್ಡ್-147, ಆಡುಗೋಡಿ
2. ಶ್ರೀ ಚಂದ್ರಶೇಖರ್ .ಪಿ, ಕಾರ್ಯದರ್ಶಿ. ವಾರ್ಡ್ ಸಮಿತಿ ವಾರ್ಡ್-147. ಆಡುಗೋಡಿ
3. ಶ್ರೀ ನರೇಂದ್ರ ಬಾಬು, ಡಿ.ಆರ್.ಎಫ್.ಓ. ಅರಣ್ಯ ಇಲಾಖೆ, ಬಿ.ಬಿ.ಎಂ.ಪಿ.
4. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
5. ಶ್ರೀ ಎಸ್. ವಿಜಯ್ ಕುಮಾರ್, ತೆರಿಗೆ ನಿರೀಕ್ಷಕರು, ಬಿ.ಬಿ.ಎಂ.ಪಿ.
6. ಡಾ. ಮಾರುತಿ .ಹೆಚ್. ಆರೋಗ್ಯಾಧಿಕಾರಿಗಳು
7. ಶ್ರೀ ಬಸವರಾಜು ಹೆಚ್.ಎಸ್., ಕಂದಾಯ ನಿರೀಕ್ಷಕರು, ವಾರ್ಡ್-147
8. ಶ್ರೀಮತಿ ಕಲ್ಪನಾ .ವಿ, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
9. ಶ್ರೀ ಗಜಾನನ ಅಕ್ಕಿಮರಡಿ, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
10. ಶ್ರೀ ಪಿ. ಜ್ಞಾನೇಶ್ವರ್, ಬಿ.ಬಿ.ಎಂ.ಪಿ. (ವಿದ್ಯುತ್)
11. ಶ್ರೀ ರಾಘವೇಂದ್ರ ಪೂಜಾರ್, ಬಿ.ಬಿ.ಎಂ.ಪಿ. ಸೂಪರ್‌ವೈಸರ್
12. ಶ್ರೀ ಸುಬ್ರಮಣಿ .ಬಿ.ಸಿ., ಮಾರ್ಷಲ್

* * * * *

ಶ್ರೀ ಪಿ. ಚಂದ್ರಶೇಖರ್, ಕಾರ್ಯದರ್ಶಿ, ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ಹಾಗೂ ವಾರ್ಡ್‌ನ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸಿ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಹಾಗೂ ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಸೂಚಿಸಿದರು.

ಶ್ರೀ ದಿಲೀಪ್ ರವರು ಮಾತನಾಡಿ, ಅಂಬೇಡ್ಕರ್ ಪಾರ್ಕ್ ಬಳಿ ಹಾಗೂ ಆಡುಗೋಡಿ ಸಮುದಾಯ ಭವನದ ಬಳಿ ಇರುವ ಕಸವನ್ನು ತೆರವುಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.



Scanned by CamScanner

